O.S.No.334/2017
PW -1

ದಿನಾಂಕ 02/11/2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು

**ಪಾಟೀ ಸವಾಲು :- ಶ್ರೀ ಜಿ.ಬಿ.ಹೆಚ್ 8 ನೇ ಪ್ರತಿವಾದಿ ಪರ ವಕೀಲರಿಂದ**

ಪಾಪಣ್ಣ ಮತ್ತು ಚಿಕ್ಕರಾಮಯ್ಯ ನನ್ನು ನಾನು ನೋಡಿಲ್ಲ ಎಂದರೆ ಸರಿ. ಪಾಪಯ್ಯನಿಗೆ ಮೂರು ಜನ ಮಕ್ಕಳು ಇರುತ್ತಾರೆ. ಗಂಗಮ್ಮ , ಚಿಕ್ಕರಾಮಯ್ಯ , ಶಂಕರಮ್ಮ, ನಂಜಮ್ಮ ಮತ್ತು ಶಿವಯ್ಯ ಇರುತ್ತಾರೆ ಎಂದರೆ ಸಾಕ್ಷಿ ಮೂರು ಜನ ಮಕ್ಕಳು ಎಂದು ಉತ್ತರಿಸಿರುತ್ತಾರೆ. ಚಿಕ್ಕರಾಮಯ್ಯನಿಗೆ ಗಂಡು ಮಕ್ಕಳು ಇಲ್ಲ ಹೆಣ್ಣು ಮಕ್ಕಳು 3 ಜನ ಇರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ.

2. ದಾವಾ ಆಸ್ತಿ ಮೊದಲಿಗೆ ಚಿಕ್ಕರಾಮಯ್ಯನಿಗೆ ಸೇರಿತ್ತು ಎಂದರೆ ಸಾಕ್ಷಿ ನಮ್ಮ ಅಜ್ಜಿ ತಾತನಿಗೆ ಸೇರಿತ್ತು ಎಂದು ಉತ್ತರಿಸಿರುತ್ತಾರೆ. ನಮ್ಮ ಅಜ್ಜಿ ಗಂಗಮ್ಮನಿಗೆ ಅವರ ತಾತನ ಕಡೆಯಿಂದ ಬಂದಿರುತ್ತದೆ. ಗಂಗಮ್ಮನಿಗೆ ಹೇಗೆ ಬಂತು ಎಂಬ ಬಗ್ಗೆ ಪಹಣಿಯನ್ನು ಹಾಜರುಪಡಿಸಿರುತ್ತೇನೆ. ಸರ್ವೆ ನಂ- 98/1 ಒಟ್ಟು 5 ಎಕರೆ 26 ಗುಂಟೆ ಇರುತ್ತದೆ ಎಂದರೆ ಸಾಕ್ಷಿ 5 ಎಕರೆ 16 ಗುಂಟೆ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ದಾವಾ ಆಸ್ತಿ ಚಿಕ್ಕರಾಮಯ್ಯ ಮತ್ತು ಪಾಪಯ್ಯನಿಗೆ ಸೇರಿತ್ತು ಎಂದರೆ ಸಾಕ್ಷಿ ಪಾಪಯ್ಯ ಮತ್ತು ಶಾನಭೋಗರ ಹೆಸರು ಬೈರಪ್ಪ ರವರಿಗೆ ಸೇರಿತ್ತು ಎಂದು ಉತ್ತರಿಸಿರುತ್ತಾರೆ. ಸದರಿ ಆಸ್ತಿ ಶಾನುಭೋಗರಿಗೆ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ-98/1 ಎ ರಲ್ಲಿ 10 ಗುಂಟೆ ಚಿಕ್ಕರಾಮಯ್ಯನ ಕಾಲದಲ್ಲಿ ಕೃಷಿಯೇತರ ಉದ್ದೇಶಕ್ಕಾಗಿ ಬದಲಾವಣೆ ಮಾಡಿಸಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಂತರ ಸದರಿ ಸರ್ವೆ ನಂ- 98/1 ಬಿ ಎಂದು ಪೋಡು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಸದರಿ ಆಸ್ತಿಯಲ್ಲಿ ಶಾರದಮ್ಮ ಮತ್ತು ಇತರರು ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

3. ಶಾನಭೋಗರ ಬೈರಪ್ಪ ಮತ್ತು ಪಾಪಣ್ಣನಿಗೆ ಅರ್ಧ ಅರ್ಧ ಇತ್ತು ಎಂದು ನನ್ನ ತಂದೆ ಹೇಳಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಸದರಿ ಆಸ್ತಿ ಅವರಿಗೆ ಯಾವ ರೀತಿ ಬಂದಿರುತ್ತದೆ ಎಂದು ನಾನು ಕೇಳಿರುವುದಿಲ್ಲ ಎಂದರೆ ಸರಿ. ಸುಮಾರು 10-12 ವರ್ಷಗಳ ಹಿಂದೆ ನನ್ನ ತಂದೆ ನನಗೆ ಹೇಳಿರುತ್ತಾರೆ. ಆ ಕಾಲಕ್ಕೆ ನನಗೆ 30 ವರ್ಷ ವಯಸ್ಸು ಆಗಿತ್ತು. ಈ ದಾವೆ ಸಲ್ಲಿಸಿದ ನಂತರ ದಾವಾ ಆಸ್ತಿ ಹೇಗೆ ಬಂತು ಎಂದು ನೀವು ದಾಖಲೆಯನ್ನು ಪರಿಶೀಲನೆ ಮಾಡಿದ್ದಿರಾ ಎಂದರೆ ಸಾಕ್ಷಿ ನಾನು ದಾಖಲೆಗಳನ್ನು ನೋಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಸಾಕ್ಷಿ ಮುಂದುವರೆದು ಸರ್ವೆ ನಂ-98/1 ಎ 2 ಇದು ಸರ್ವೆ ನಂ- 98/4 ರಲ್ಲಿ ನಮೂದಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಸರ್ವೆ ನಂ- 98/4 ರಲ್ಲಿಯ ಆಸ್ತಿ ಸರ್ವೆ ನಂ- 98/1 ಎ ರಲ್ಲಿ ಪೋಡು ಆಗಿರುತ್ತದೆ. ತಿದ್ದುಪಡಿ ಸಂಬಂಧ ನಾನು ದಾವೆ ಹಾಕಿರುತ್ತೇನೆ. ಸದರಿ ಆಸ್ತಿಗಳ ಪೋಡು ಮತ್ತು ಪಹಣಿ ತಪ್ಪಾಗಿರುತ್ತದೆ. ಸದರಿ ಆಸ್ತಿಗಳ ಪೋಡು ಮತ್ತು ಪಹಣಿ ತಪ್ಪಾಗಿರುವ ಬಗ್ಗೆ ನನ್ನ ತಂದೆ ಕಾಲಕ್ಕೆ ಅರ್ಜಿ ಕೊಟ್ಟಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಆ ಸಂಬಂಧ ದಾಖಲೆಯನ್ನು ಹಾಜರುಪಡಿಸಿರುತ್ತೇನೆ.

4. ಸರ್ವೆ ನಂ- 98/4 ರ 20 ಗುಂಟೆ ರಾಮಲಿಂಗಪ್ಪ ರವರ ಕಡೆಯಿಂದ ಮಡಿವಾಳ ತಿಮ್ಮಪ್ಪ ಇವರಿಗೆ ಕ್ರಯ ಆಗಿರುತ್ತದೆ . ಸದರಿ ಕ್ರಯ ಪತ್ರದಲ್ಲಿ ಪೋಡು ತಪ್ಪಾಗಿರುತ್ತದೆ. ಸದರಿ ಕ್ರಯ ಪತ್ರದ ಪ್ರಕಾರ 20 ಗುಂಟೆ ಕ್ರಯ ಆಗಿರುತ್ತದೆ. ಸರ್ವೆ ನಂ- 98/4 ಇರುವ ಬದಲಾಗಿ ಸರ್ವೆ ನಂ- 98/1 ಎ2 ಗೆ ಖಾತೆ ಆಗಿರುತ್ತದೆ ಎಂದರೆ ಸರಿ. ಕ್ರಯ ಆದ ನಂತರ ಸರ್ವೆ ನಂ-98/1 ಎ ಇದ್ದದ್ದನ್ನು ಸರ್ವೆ ನಂ-98/1 ಎ 1 ಎಂದು ಪೋಡು ಆಗಿರುತ್ತದೆ ಎಂದರೆ ಸರಿ. ಸದರಿ ಕ್ರಯಪತ್ರದ ಆಧಾರದ ಮೇಲೆ ಖಾತೆ ಆಗಿದ್ದು ಅದರಲ್ಲಿ ಸರ್ವೆ ನಂ-98/1 ಎ2 ರಲ್ಲಿ ರಾಮಲಿಂಗಪ್ಪ ರವರ ಹೆಸರು ತಂದಿಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸರ್ವೆ ನಂ-98/1 ಎ2 ರಲ್ಲಿ ಸ್ವಾಧೀನದಲ್ಲಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ರಾಮಲಿಂಗಪ್ಪ ಇವರು ಸರ್ವೆ ನಂ- 98/4 ರಲ್ಲಿ

ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ಸದರಿ ಕ್ರಯ ಪತ್ರ 1991 ರಲ್ಲಿ ಆಗಿರಬಹುದು ಎಂದು ಉತ್ತರಿಸಿರುತ್ತಾರೆ.

5. ಸರ್ವೆ ನಂ- 98/4 ರಲ್ಲಿ ತಪ್ಪಾಗಿರುವುದನ್ನು ಸರಿಪಡಿಸಲು ರಾಲಿಂಗಪ್ಪ ಮತ್ತು ತಿಮ್ಮಪ್ಪ ಆಗಲೀ ಎಲ್ಲಿಯೂ ಅರ್ಜಿ ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ, ನಾನು ಕೊಟ್ಟಿರುತ್ತೇನೆ ಎಂದು ಉತ್ತರಿಸಿರುತ್ತಾರೆ.

**ನ್ಯಾಯಾಲಯದ ಸಮಯ 2-00 ಗಂಟೆ ಆದ ಕಾರಣ ಮುಂದುವರೆದ ಪಾಟೀ ಸವಾಲನ್ನು ಮದ್ಯಾಹ್ನ 3-00 ಗಂಟೆಗೆ ಮುಂದೂಡಲಾಯಿತು.**

**ಸಾಕ್ಷಿಯನ್ನು ಮದ್ಯಾಹ್ನ 3-00 ಗಂಟೆಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

6. ನಾನು ಹಾಜರುಪಡಿಸಿರುವ ವಂಶವೃಕ್ಷವನ್ನು ನಾನು ಹೇಳಿ ಬರೆಸಿರುತ್ತೇನೆ. ನಮ್ಮ ವಂಶವೃಕ್ಷದ ಮಾಹಿತಿಯನ್ನು ನನ್ನ ತಂದೆ ಹೇಳಿದ ಮೇರೆಗೆ ಬರೆಸಿರುತ್ತೇನೆ. ನನ್ನ ತಂದೆ ಬರವಣಿಗೆ ಮಾಡಿದ ವಂಶವೃಕ್ಷದ ದಾಖಲೆ ಇರುವುದಿಲ್ಲ. ಪಾಪಯ್ಯನಿಗೆ ಶಂಕರಮ್ಮ ಮತ್ತು ನಂಜಮ್ಮ ಎಂಬ ಮಕ್ಕಳು ಇರುತ್ತಾರೆ ಅವರನ್ನು ನಾನು ವಂಶವೃಕ್ಷದಲ್ಲಿ ಬರೆರುಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಊರಿನಲ್ಲಿ ವಾಸ ಇಲ್ಲದ ಕಾರಣ ವಂಶವೃಕ್ಷದ ಬಗ್ಗೆ ಸರಿಯಾದ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಚಿಕ್ಕರಾಮಯ್ಯನಿಗೆ ಮಕ್ಕಳು ಇರುವ ಬಗ್ಗೆ ನನಗೆ ತಿಳಿದುಕೊಂಡಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ.

7. 8 ನೇ ಪ್ರತಿವಾದಿ ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ಬರೆದಿರುವ ವಿಚಾರವನ್ನು ನಾನು ತಿಳಿದುಕೊಂಡಿರುತ್ತೇನೆ. ನಾನು ಈ ದಾವೆಯನ್ನು ಮೂರು ಜನರ ವಿರುದ್ಧ ಹೂಡಿರುತ್ತೇನೆ. ಈ ದಾವೆಯಲ್ಲಿ ಪ್ರತಿವಾದಿಗಳು ಎಷ್ಟು ಜನ ಇರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆಗೆ ಮೂರು ಜನ ಹೆಂಡತಿಯರು ಎಂದರೆ ಸರಿ. ಮೊದಲನೇ ಹೆಂಡತಿ ಗಂಗಮ್ಮ ಎಂದರೆ ಸರಿ. ಗಂಗಮ್ಮ ಆರೋಗ್ಯವಾಗಿ ಚೆನ್ನಾಗಿದ್ದಾರೆ ಎಂದರೆ ಸರಿ. ಅವರಿಗೆ ವಂಶವೃಕ್ಷದ ಬಗ್ಗೆ ಗೊತ್ತಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಶಾನುಭೋಗರ ಮಗ ಗೋಪಾಲರಾವ್ ನನಗೆ ಗೊತ್ತು ಎಂದರೆ ಸರಿ. ಗೋಪಾಲರಾವ್ ಈ ದಾವೆ ಹೂಡಲು ಮಾಹಿತಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಚಿಕ್ಕರಾಮಯ್ಯನಿಗೆ ಗಂಗಮ್ಮ, ರಾಮಕ್ಕ ಮತ್ತು 8 ನೇ ಪ್ರತಿವಾದಿ ಮಕ್ಕಳು ಇರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

8. ಚಿಕ್ಕರಾಮಯ್ಯನಿಗೆ 2 ಎಕರೆ 20 ಗುಂಟೆ ಜಮೀನು ಬಂದಿರುತ್ತದೆ ಎಂದು ಯಾವ ಆಧಾರದ ಮೇಲೆ ಹೇಳಿರುತ್ತೀರಿ ಎಂದರೆ ಸಾಕ್ಷಿ ನಾನು ಹೇಳಿಲ್ಲ ಎಂದು ಉತ್ತರಿಸಿರುತ್ತಾರೆ. ಪಾಪಯ್ಯ ರವರು 10 ಗುಂಟೆ ಜಮೀನನ್ನು ಕೃಷಿಯೇತರ ಉದ್ದೇಶಕ್ಕಾಗಿ ಮಾಡಿರುವ ಬಗ್ಗೆ ದಾಖಲಾತಿ ನೋಡಿರುವುದಿಲ್ಲ. ಪಾಪಯ್ಯ ರವರು ನಾನು ಹುಟ್ಟುವ ಮೊದಲು ತೀರಿಕೊಂಡಿರುತ್ತಾರೆ. ಶಾನುಭೋಗರ ಬೈರಪ್ಪ ಇವರಿಗೆ 2 ಎಕರೆ 38 ಗುಂಟೆ ಇರುವ ಬಗ್ಗೆ ನನ್ನ ತಂದೆ ನನಗೆ ಹೇಳಿರುತ್ತಾರೆ. ಸದರಿ ಆಸ್ತಿ ಶಾನುಭೋಗರ ಬೈರಪ್ಪ ರವರಿಗೆ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ.

9. ಸರ್ವೆ ನಂ- 98/1 ಎ2 ರಲ್ಲಿ 1 ಎಕರ 34 ಗುಂಟೆ ಜಮೀನನ್ನು 1991-92 ರಲ್ಲಿ ಪೋಡಾಗಿರುತ್ತದೆ. ಅದೇ ರೀತಿ 3 ಎಕರೆ 22 ಗುಂಟೆ ಜಮೀನನ್ನು ಯಾವಾಗ ಪೋಡು ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ನಾನು ಸದರಿ ಪೋಡಾಗಿರುವ

ವಿಚಾರವನ್ನು 7-8 ವರ್ಷದ ಹಿಂದೆ ಖಾತೆ ಬದಲಾಣೆ ಮಾಡಿಕೊಳ್ಳಲು ಹೋದಾಗ ಗೊತ್ತಾಗಿರುತ್ತದೆ. ಸದರಿ ಪೋಡು ಯಾವ ಆಧಾರದ ಮೇಲೆ ಆಗಿರುತ್ತದೆ ಎಂದು ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ನನ್ನ ತಾತನ ಹೆಸರು ವೀರನಾಗಪ್ಪ , ವೀರನಾಗಪ್ಪನ ತಂದೆ ಹೆಸರು ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿ ನನ್ನ ತಾತನಿಗೆ ಆಗಲೀ , ಅವರ ತಂದೆಗೆ ಆಗಲೀ ಸೇರಿತ್ತು ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿ ನಮ್ಮ ಕುಟುಂಬಕ್ಕೆ ಸಂಬಂಧಿಸಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂದು ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

10. ಶಿವಯ್ಯ ಮತ್ತು ಗಂಗಮ್ಮ ವಿಭಾಗ ಆಗಿರುವ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿದ್ದಿರಾ ಎಂದರೆ ಸಾಕ್ಷಿ ನಾನು ಬರೆಸಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನನ್ನ ತಂದೆ ಅವರ ಅಣ್ಣ ತಮ್ಮಂದಿರ ನಡುವೆ ವಿಭಾಗ ಮಾಡಿಕೊಂಡಿರುವ ಬಗ್ಗೆ ಹೇಳಿರುತ್ತಾರೆ. ಅವರು ಎಷ್ಟು ವರ್ಷಗಳ ಹಿಂದೆ ವಿಭಾಗ ಮಾಡಿಕೊಂಡಿರುತ್ತಾರೆ ಗೊತ್ತಿರುವುದಿಲ್ಲ. ಭಾಗ ಮಾಡಿಕೊಂಡ ಬಗ್ಗೆ ಮುಟೇಷನ್ ಮತ್ತು ಪಹಣಿ ಇರುತ್ತವೆ. ಯಾರ ಯಾರ ಭಾಗಕ್ಕೆ ಎಷ್ಟು ಎಷ್ಟು ಬಂದಿರುತ್ತದೆ ಎಂದು ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು ನಮ್ಮ ಅಜ್ಜಿಯ ಭಾಗ 30 ಗುಂಟೆ ಬಂದಿರುತ್ತದೆ ಎಂದು ಉತ್ತರಿಸಿರುತ್ತಾರೆ. ವಿಭಾಗ ಪತ್ರ ಇರುವುದಿಲ್ಲ. ಯಾರ ಸಮಕ್ಷಮ ವಿಭಾಗ ಪತ್ರ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ.

11. 50 ವರ್ಷಗಳ ಹಿಂದೆ ಭಾಗ ಮಾಡಿಕೊಂಡ ಬಗ್ಗೆ ದಾಖಲೆಗಳು ಇರುತ್ತವೆ. ಸದರಿ ವಿಭಾಗ ಮಾಡಿಕೊಂಡ ದಾಖಲೆಗಳು ನ್ಯಾಯಾಲಯ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಗಂಗಮ್ಮನಿಗೆ 30 ಗುಂಟೆ ಬಂದ ಸಂಬಂಧ ಎಂ.ಆರ್ ಮತ್ತು ಪಹಣಿ ಇರುತ್ತದೆ , ಗಂಗಮ್ಮನಿಗೆ ಶಿವಕುಮಾರ್ ಎಂಬ ಒಬ್ಬನೇ ಮಗ

ಇರುತ್ತಾನೆ ಎಂದರೆ ಸರಿ. ಆತ ತೀರಿಕೊಂಡಿರುತ್ತಾರೆ ಎಂದರೆ ಸರಿ. ಸದರಿ 30 ಗುಂಟೆ ಆಸ್ತಿ ಗಂಗಮ್ಮನ ಗಂಡನ ಆಸ್ತಿ ಇರುವುದಿಲ್ಲ ಎಂದರೆ ಸರಿ. ಸೋಮಶೇಖರಯ್ಯ ಹೆಂಡತಿ ಗಂಗಮ್ಮನಿಗೆ 30 ಗುಂಟೆ ಬಂದಿರುವುದಿಲ್ಲ ಎಂದರೆ ಸಾಕ್ಷಿ ದಾನ ಮಾಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಸದರಿ 30 ಗುಂಟೆ ಆಸ್ತಿಯನ್ನು ನಮ್ಮ ಅಜ್ಜಿ ನಮ್ಮ ಅಣ್ಣನಿಗೆ ದಾನ ಮಾಡಿರುತ್ತಾರೆ. ಗಂಗಮ್ಮನಿಗೆ ವಿಭಾಗದಲ್ಲಿ ಯಾವುದೇ ಆಸ್ತಿ ಬಂದಿರುವುದಿಲ್ಲ ಮತ್ತು ದಾನ ಪತ್ರ ಬರೆದುಕೊಡುವ ಪ್ರಮೇಯ ಇರುವುದಿಲ್ಲ ಎಂದರೆ ಸರಿಯಲ್ಲ.

12. ಗಂಗಮ್ಮನಿಗೆ ದಾನ ಪತ್ರ ಬರೆದುಕೊಡುವ ಯಾವುದೇ ಹಕ್ಕು ಅಧಿಕಾರ ಪಾಪ್ತವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಶಾನುಭೋಗರ ಬೈರಪ್ಪ  ರವರನ್ನು ನೋಡಿರುವುದಿಲ್ಲ. ಉಳಿದ ಆಸ್ತಿ ಅವರಿಗೆ ಸೇರಿರುತ್ತದೆ ಎಂಬುದನ್ನು ನಮ್ಮ ತಂದೆ ಹೇಳಿರುತ್ತಾರೆ. 3 ಗುಂಟೆ ಕೃಷ್ಣಮೂರ್ತಿ ಯಾವಾಗ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಬಹಳ ವರ್ಷ ಆಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಕ್ರ ಯ ಆಗುವ ಕಾಲಕ್ಕೆ ನಾನು ಹೋಗಿರಲಿಲ್ಲ ಮತ್ತು ಯಾರಿಂದಲೂ ಖುದ್ದಾಗಿ ತಿಳಿದುಕೊಂಡಿರುವುದಿಲ್ಲ.  ನಾನು ನಾಗಣ್ಣನ್ನು ನೋಡಿರುತ್ತೇನೆ. ಅವರ ಮೃತಪಟ್ಟು 25-30 ವರ್ಷ ಆಗಿರುತ್ತದೆ. ನಾಗಣ್ಣನ ಹೆಸರಿಗೆ ಖಾತೆ ಯಾವಾ ಕಾರಣಕ್ಕಾಗಿ ಆಗಲಿಲ್ಲ ಎಂದು ತಿಳಿದುಕೊಂಡಿರುತ್ತೀರಿ ಎಂದರೆ ಸಾಕ್ಷಿ ನಮ್ಮ ಖಾತೆ ಬದಲಾವಣೆ ಆಗದ ಕಾರಣ ತಿಳಿದುಕೊಂಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ.

13. ನಾಗಣ್ಣನಿಗೆ 3 ಗುಂಟೆ ಜಮೀನು ಸರ್ವೆ ನಂ-98/1 ಎ 1 ರಲ್ಲಿರುತ್ತದೆ. ಸರ್ವೆ ನಂ- 98/1 ಎ 1 ನನಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ಸರ್ವೆ ನಂ-98/1 ಎ 1 ನ್ನು ನಾನು ಸೇರಿಸಿರುವುದಿಲ್ಲ. ಸರ್ವೆ ನಂ-98/1 ಎ 1 3 ಎಕರೆ 20 ಗುಂಟೆ ಇರುತ್ತದೆ. ಸದರಿ ಆಸ್ತಿಯನ್ನು ನಾಗಣ್ಣನ ಮಕ್ಕಳು ಸರಿಮಾಡಿಸಿಕೊಡುವಂತೆ ನನಗೆ ಹೇಳಿರುವುದಿಲ್ಲ ಎಂದರೆ ಸರಿ. ನಾನು ಈ ದಾವೆಯನ್ನು

ಸರ್ವೆ ನಂ- 98/1 ಎ2 ಮತ್ತು ಸರ್ವೆ ನಂ- 98/4 ಕ್ಕೆ ಹಾಕಿರುತ್ತೇನೆ. ನಾನು ಸದರಿ ಆಸ್ತಿಗಳ ಬಗ್ಗೆ ಕಂದಾಯ ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ. ಸರ್ವೆ ನಂ- 98/4 1 ಎಕರೆ 5 ಗುಂಟೆ ಇರುತ್ತದೆ. ಸದರಿ ಆಸ್ತಿ ನಾಗಣ್ಣನ ಸುಬರ್ದಿಯಲ್ಲಿರುತ್ತದೆ. ಸರ್ವೆ ನಂ- 98/4 ರಲ್ಲಿ 20 ಗುಂಟೆ ಆಸ್ತಿ ನಾಗಣ್ಣ ಮಕ್ಕಳಿಗೆ ಸೇರಿದೆ ಎಂದು ನಿಮಗೆ ಯಾರು ಹೇಳಿದರು ಎಂದರೆ ಸಾಕ್ಷಿ ನಾನು ದಾಖಲೆಯನ್ನು ನೋಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಸದರಿ ಆಸ್ತಿಯನ್ನು ಯಾರ ಕಡೆಯಿಂದ ಕೊಂಡುಕೊಂಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ.

14. ನಾನು ಗುಂಡಯ್ಯಶೆಟ್ಟಿ ರವರನ್ನು ನಾನು ನೋಡಿರುವುದಿಲ್ಲ. ಗುಂಡಯ್ಯಶೆಟ್ಟಿ ಯಾರಿಂದ ಆಸ್ತಿಯನ್ನು ಖರೀದಿಸಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. 7 ನೇ ಪ್ರತಿವಾದಿಗೆ 7 ಗುಂಟೆ ಆಸ್ತಿಯನ್ನು ಖರೀದಿಸಿದ ಬಗ್ಗೆ ನಾನು ಕ್ರಯ ಪತ್ರವನ್ನು ಹಾಜರುಪಡಿಸಿರುತ್ತೇನೆ. ಅವರು ಯಾರಿಂದ ಖರೀದಿಸಿರುತ್ತಾರೆ ನನಗೆ ಗೊತ್ತಿರುವುದಿಲ್ಲ. 5 ಮತ್ತು 6 ನೇ ಪ್ರತಿವಾದಿಗಳಿಗೆ 37 ಗುಂಟೆ ಜಮೀನು ಇದೆ ಎಂದು ನಿಮಗೆ ಯಾರು ಹೇಳಿರುತ್ತಾರೆ ಎಂದರೆ ಸಾಕ್ಷಿ ಅವರು ನಮ್ಮ ಜಮೀನಿನ ಪಕ್ಕ ನಮಗೆ ಬುದ್ದಿ ಬಂದಾಗಿನಿಂದ ಇರುತ್ತಾರೆ. ಸದರಿ ಪ್ರತಿವಾದಿ 5 ಮತ್ತು 6 ರವರ ಹೆಸರಿನಲ್ಲಿ ಖಾತೆ ಪಹಣಿ ಇರುವುದಿಲ್ಲ ಎಂದರೆ ಸರಿ. 37 ಗುಂಟೆ ಅಳತೆ ಮಾಡಿಸಿರುವುದಿಲ್ಲ.

15. ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುವ ಬಗ್ಗೆ ಲೆಕ್ಕಚಾರ ಮಾಡಿ 37 ಗುಂಟೆ ಇರುತ್ತದೆ ಎಂದು ಬರೆಸಿರುತ್ತೇನೆ. ಖಾತೆ ಪಹಣಿ ಪ್ರತಿವಾದಿಗಳ ಹೆಸರಿಗೆ ತಪ್ಪಾಗಿ ಮಾಡಿದ್ದಾರೆ ಎಂದು ನನಗೆ ಗೊತ್ತಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಪ್ರತಿವಾದಿ 1 ರಿಂದ 7 ರವರ ಸರ್ವೆ ನಂಬರ್ , ವಿಸ್ತಿರ್ಣ ಮತ್ತು ಹಕ್ಕುಗಳ ಬಗ್ಗೆ ನಾನೇ ಪರಿಶೀಲನೆ ಮಾಡಿರುತ್ತೇನೆ ಎಂದರೆ ಸರಿ. 1 ರಿಂದ 7 ನೇ ಪ್ರತಿವಾದಿಗಳು ನನ್ನ ಬಳಿ ಬಂದು ಖಾತೆ ಪಹಣಿ ತಪ್ಪಾಗಿ ಆಗಿದೆ ಎಂದು ಹೆಳಿದ್ದಾರಾ ಎಂದರೆ ಸಾಕ್ಷಿ ನಾನೇ ಹೇಳಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಸರ್ವೆ ನಂ- 98/1 ಎ1 ಮತ್ತು ಸರ್ವೆ ನಂ- 98/1 ಎ2 ಎರಡು

ಸರ್ವೆನಂಬರ್ ಗಳು ಸರ್ವೆ ನಂಬರ್ ಮತ್ತು ಪೋಡು ತಪ್ಪಾಗಿದೆಯಾ ಎಂದರೆ ಸಾಕ್ಷಿ ಪೋಡು ತಪ್ಪಾಗಿದೆ ಎಂದು ಉತ್ತರಿಸಿರುತ್ತಾರೆ.

16. 1 ರಿಂದ 7 ನೇ ಪ್ರತಿವಾದಿಗಳು ನಮ್ಮ ಪರವಾಗಿ ಸಾಕ್ಷ್ಯ ಹೇಳುವಂತೆ ಹಾಗೂ ದಾವೆ ನಡೆಸುವಂತೆ ಯಾವುದೇ ಅಧಿಕಾರ ಪತ್ರ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿ. ಪ್ರತಿವಾದಿಗಳ ಪರವಾಗಿ ನಾನೇ ಹಕ್ಕು ಅಧಿಕಾರದ ಬಗ್ಗೆ ನಾನೇ ಯಾವ ಆಧಾರದ ಮೇಲೆ ಹೇಳುತ್ತಿಯಾ ಎಂದರೆ ಸಾಕ್ಷಿ ನಮ್ಮ ಜಮೀನಿ ಪಹಣಿ ಅವರ ಪಹಣಿ ಬರುತ್ತಿದ್ದ ಕಾರಣ ನಾನು ಕೇಳಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಈ ದಾವೆ ಸಲ್ಲಿಸುವ ಕಾಲಕ್ಕೆ ಶಾರಮ್ಮ ನನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ನನಗೂ ಅವರಿಗೂ ಸಂಬಂಧ ಇಲ್ಲ ಎಂದು ಉತ್ತರಿಸಿರುತ್ತಾರೆ. ಸರ್ವೆ ನಂ- 98/1 ಎ1 ರಲ್ಲಿ ಎಷ್ಟು ಜನ ಇರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಈ ದಾವೆಯಲ್ಲಿ ನಾನು ಮತ್ತು 1 ರಿಂದ 7 ನೇ ಪ್ರತಿವಾದಿಗಳು ರಾಜೀ ಪತ್ರ ಸಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ ರಾಜೀ ಪತ್ರದಲ್ಲಿ ಯಾವ ಯಾವ ಆಸ್ತಿ ಸೇರಿಸಿರುತ್ತೀರಿ ಎಂದರೆ ಸಾಕ್ಷಿ ಸರ್ವೆ ನಂ- 98/1 ಎ2 ಮತ್ತು 98/4 ಸೇರಿಸಿರುತ್ತೇನೆ ಎಂದು ಉತ್ತರಿಸಿರುತ್ತಾರೆ.

17. ಸರ್ವೆ ನಂಬರ್ ಮತ್ತು ಪೋಡು ನಂಬರ್ ತಪ್ಪಾಗಿರುತ್ತದೆ ಎಂದು ನಾನು ಮಾತ್ರ ತಾಲ್ಲೂಕು ಕಛೇರಿಗೆ ಅರ್ಜಿ ಸಲ್ಲಿಸಿರುತ್ತೇನೆ. ನಮ್ಮ ತಂದೆ ಅರ್ಜಿ ಕೊಟ್ಟಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ತಾಲ್ಲೂಕು ಕಛೇರಿ ಯವರು ಯಾವ ಆದೇಶ ಮಾಡದ ಕಾರಣ ಈ ದಾವೆ ಹೂಡಿರುತ್ತೇನೆ. ತಾಲ್ಲೂಕು ಕಛೇರಿಗೆ ಅರ್ಜಿ ಕೊಟ್ಟ ಸಂಬಂಧ ಯಾವುದೇ ದಾಖಲೆ ಇರುವುದಿಲ್ಲ. ಪಹಣಿ ನಮ್ಮ ಅಜ್ಜಿ ಹೆಸರಿಗೆ ಪಹಣಿ ಮುಂದುವರೆಯುತ್ತಾ ಇದೆ ಎಂದು ಹೇಳಿರುತ್ತೇನೆ. ಉಳಿದವರ ಹೆಸರು ಹೇಳಿರುವುದಿಲ್ಲ. ಪಹಣಿಯಲ್ಲಿ ಯಾರ ಹೆಸರು ಬರುತ್ತಿದೆ ಎಂದು ನಾನು ವಿಚಾರ ಮಾಡಿರುವುದಿಲ್ಲ.

ನಾಗಣ್ಣ ಮುಟೇಷನ್ ತಪ್ಪಾಗಿರುತ್ತದೆ ಎಂದು ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ತಿಮ್ಮಪ್ಪ ಇವರ ಹೆಸರಿಗೆ ಮುಟೇಷನ್ ತಪ್ಪಾಗಿರುತ್ತದೆ ಎಂದು ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ಸರಿ. ನಾನು ತಿಮ್ಮಪ್ಪನ ಹೆಸರನ್ನು ಸರಿಮಾಡುವಂತೆ ಈ ದಾವೆಯಲ್ಲಿ ಕೇಳಿರುವುದಿಲ್ಲ.

18. ನನಗೆ ಯಾರು ತೊಂದರೆ ಮಾಡಿರುವುದಿಲ್ಲ ಎಂದರೆ ಸರಿ. ಈ ದಾವೆ ಸಲ್ಲಿಸುವ ಮೊದಲು ಪಂಚಾಯಿತಿ ಮಾಡಿಸಿರುತ್ತೀರಾ ಎಂದರೆ ಸರಿ. ಸದರಿ ಪಂಚಾಯಿತಿದಾರರ ಹೆಸರು ಗೋಪಾಲಗೌಡ ಮತ್ತು ಇತರರು ಹೆಸರು ಗೊತ್ತಿರುವುದಿಲ್ಲ. ಈ ದಾವೆ ಸಲ್ಲಿಸುವ 3 ವರ್ಷ ಮತ್ತು 2 ವರ್ಷಗಳ ಮೊದಲು ಪಂಚಾಯಿತಿ ಮಾಡಿಸಿರುತ್ತೇನೆ. ಪೋಡು ತಾಪ್ಪಗಿದೆ ಸರಿಪಡಿಸುವ ಕುರಿತು ಪಂಚಾಯಿತಿ ಮಾಡಿರುಸಿರುತ್ತೇನೆ. ಪಂಚಾಯಿತಿದಾರರು ಪೋಡು ತಪ್ಪಾಗಿರುವ ಬಗ್ಗೆ ರೆವಿನ್ಯೂ ಕಛೇರಿಗೆ ಅರ್ಜಿ ಸಲ್ಲಿಸ ಬೇಕು ಎಂದು ಹೇಳಿರುತ್ತಾರೆ ಎಂದರೆ ಸರಿ.

19. ಪಂಚಾಯಿತಿದಾರರು ಹೇಳಿದ ನಂತರ ನಾನು ರೆವಿನ್ಯೂ ಅಧಿಕಾರಿಗಳ ಮುಂದೆ ಯಾವುದೇ ಅರ್ಜಿ ಕೊಟ್ಟಿರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತು ಊರಿನ ಪಕ್ಕ ಇದೆ ಎಂದರೆ ಸರಿ. ಸದರಿ ಆಸ್ತಿ ತುಂಬಾ ಬೆಲೆ ಬಾಳುತ್ತದೆ ಎಂದರೆ ಸರಿ. ಒದೊಂದು ನಿವೇಶನ ಬೆಲೆ ಸುಮಾರು 3-4 ಲಕ್ಷ ಆಗುತ್ತದೆ ಎಂದರೆ ಸಾಕಿ ನನಗೆ ಬೆಲೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ದಾವಾ ಆಸ್ತಿಗೆ ಸರ್ಕಾರಿ ರಸ್ತೆ ಹೊಂದಿಕೊಂಡಿರುತ್ತದೆ ಎಂದರೆ ಸರಿ. ದಾವಾ ಆಸ್ತಿ ಮೂಲತಃ ಚಿಕ್ಕರಾಮಯ್ಯನಿಗೆ ಸೇರಿದ ಆಸ್ತಿ ಎಂದರೆ ಸಾಕ್ಷಿ ನಮ್ಮ ಅಜ್ಜಿಗೆ ಸಂಬಂಧಿಸಿದ್ದು ಎಂದು ಉತ್ತರಿಸಿರುತ್ತಾರೆ. ದಾವಾ ಆಸ್ತಿ ಪೂರ ಜಮೀನು 5 ಎಕರೆ 16 ಗುಂಟೆ ಆಸ್ತಿಯನ್ನು ಚಿಕ್ಕರಾಮಯ್ಯ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. 10 ಗುಂಟೆ ಪೋಡು ಆದ ಕಾರಣ ಸದರಿ ಜಮೀನು ಸರ್ವೆ ನಂ- 98/1 ಎ ಮತ್ತು 98/1 ಬಿ ಎಂದು

ಆಗಿರುತ್ತದೆ ಎಂದರೆ ಸರಿಯಲ್ಲ. ತಿಮ್ಮಪ್ಪ ಮತ್ತು ರಾಮೇಲಿಂಗಪ್ಪ ರವರ ಕ್ರಯಪತ್ರದಲ್ಲಿ ಜಮೀನು ಸರ್ವೆನಂ-98/4 ಅಂತಾ ಇರುವುದು ಸರ್ವೆ ನಂ-98/1 ಎಂದು ತಪ್ಪಾಗಿ ಪೋಡಾಗಿರುತ್ತದೆ ಎಂದರೆ ಸಾಕ್ಷಿ 98/1ಎ1 ಎಂದು ಆಗಿರುತ್ತದೆ ಎಂದು ಉತ್ತರಿಸಿರುತ್ತಾರೆ.

20. ಸರ್ವೆ ನಂ- 98/1 ಎಂದು ಬಿದ್ದಿದ್ದ ಕಾರಣ ಎಂ.ಆರ್ ನಲ್ಲಿ ಸರ್ವೆ ನಂ-98/1ಎ2 ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಶಾನುಭೋಗರ ಬೈರಪ್ಪ ರವರ ಮಗನ ಹೆಸರು ಗೊತ್ತಿರುವುದಿಲ್ಲ ಮೊಮ್ಮಗನ ಹೆಸರು ಕೃಷ್ಣಮೂರ್ತಿ ಎಂದು ಉತ್ತರಿಸಿರುತ್ತಾರೆ. ದಾವಾ ಆಸ್ತಿ ಶಾನುಭೋಗರ ಬೈರಪ್ಪನಿಗೆ ಆಗಲೀ , ಗಂಗಮ್ಮನಿಗೆ ಆಗಲೀ ಯಾವುದೇ ರೀತಿ ಸಂಬಂಧ ಇರುವುದಿಲ್ಲ. ಚಿಕ್ಕರಾಮಯ್ಯನ ಆಸ್ತಿಗಳನ್ನು ಚಿಕ್ಕರಾಮಯ್ಯನ ಮಕ್ಕಳು ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ.

21. ಚಿಕ್ಕರಾಮಯ್ಯನಿಗೆ 3 ಜನ ಮಕ್ಕಳು ಇರುವುದು ನನಗೆ ಗೊತ್ತಿದದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ರಂಗನಾಥಸ್ವಾಮಿ ದೇವಸ್ಥಾನ ಇರುತ್ತದೆ ಎಂದರೆ ಸರಿ. ಸದರಿ ದೇವಸ್ಥಾನದ ಪೂಜೆ ಯಾರು ಮಾಡುತ್ತಾರೆಂದು ನನಗೆ ಗೊತ್ತಿಲ್ಲ, ಸದರಿ ದೇವಸ್ಥಾನವನ್ನು ನಾನು 15 ವರ್ಷಗಳಿಂದ ನೋಡುತ್ತಿರುತ್ತೇನೆ. ನಮ್ಮ ಊರು ಸಣ್ಣ ಗ್ರಾಮ ಎಂದರೆ ಸರಿ. ಸದರಿ ದೇವಸ್ಥಾನವನ್ನು ಶಾರದಮ್ಮ, ಆತನ ಗಂಡ ಮತ್ತು ಮಕ್ಕಳು ಕಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಶಾರದಮ್ಮನ ಮಕ್ಕಳನ್ನು ನಾನು ಈ ದಾವೆ ಹೂಡಿದ ನಂತರ ನೋಡಿರುತ್ತೇನೆ. ಶಾರದಮ್ಮ ಅರ್ಜಿಯಲ್ಲಿ ಗಂಡನ ಹೆಸರು ಏನು ಬರೆಸಿರುತ್ತಾರೆಂದು ನೀವು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ನಮ್ಮ ವಕೀಲರಿಗೆ ಗೊತ್ತು ಎಂದು ಉತ್ತರಿಸಿರುತ್ತಾರೆ. ಈ ಕೇಸಿನ

ವಿಚಾರವನ್ನು ಗೋಪಾಲರಾವ್ ರವರ ಮುದಾಳತ್ವದಲ್ಲಿ ಕತೆ ಕಟ್ಟಿ ಹೂಡಿರುತ್ತೀರಿ ಎಂದರೆ ಸರಿಯಲ್ಲ.

22. ಸರ್ವೆ ನಂ- 98/1 ಎ1 ಮತ್ತು 98/1 ಎ2 ನ್ನು 8 ನೇ ಪ್ರತಿವಾದಿ ಸ್ವಾಧೀನಾನುಭದಲ್ಲಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಯಾರು ಕೇಳುತ್ತಿದ್ದಾರೆಂದು ನಿಮಗೆ ಗೊತ್ತಿದೆಯಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಶಾರದಮ್ಮ ಮತ್ತು ಅವರ ಮಕ್ಕಳು ಅವಿದ್ಯಾವಂತರ ಅವರು ದೇವಸ್ಥಾನ ಪೂಜೆ ಮತ್ತು ವ್ಯವಸಾಯ ಮಾಡಿಕೊಂಡು ಇರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ದಾಖಲೆಗಳನ್ನು ತಿದ್ದುಪಡಿ ಮಾಡಿಸಲು ಹೋದಾಗ ಪಹಣಿ ಯಾರ ಯಾರ ಹೆಸರಿನಲ್ಲಿ ಇದೆ ಎಂದು ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿಲ್ಲ ತಂದು ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನಮ್ಮ ವಕೀಲರು ಪೋಡು ತಪ್ಪಾಗಿರುವ ಬಗ್ಗೆ ತಿಳಿಸಿರುತ್ತಾರೆ.

23. ಸರ್ವೆ ನಂಬರ್ ನಲ್ಲಿ ಪೋಡು ತಪ್ಪಾಗಿ ಬಂದಿದ್ದ ಕಾರಣ ನಾನು ಮತ್ತು ಪ್ರತಿವಾದಿ 1 ರಿಂದ 7 ರವರು ಸೇರಿಕೊಂಡು ಈ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೂ ಮತ್ತು 1 ರಿಂದ 7 ನೇ ಪ್ರತಿವಾದಿಗಳಿಗೆ ಆಗಲೀ ಯಾವುದೇ ಹಕ್ಕು ಅಧಿಕಾರ ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. 30 ಗುಂಟೆ ಗಂಗಮ್ಮನ ಹೆಸರಿಗೆ ತಪ್ಪಾಗಿ ನಮೂದಾಗಿರುತ್ತದೆ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿಗೆ ಸಂಬಂಧಿಸಿದ ಆಸ್ತಿಯನ್ನು ಹೊಡೆಯುವ ಸಲುವಾಗಿ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗೋಪಾಲರಾವ್ ಏನು ಕೆಲಸ ಮಾಡುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಗೋಪಾಲರಾವ್ ಹೇಳಿದಂತೆ ನ್ಯಾಯಾಲಯದಿಂದ ರಾಜೀ ಡಿಕ್ರಿ ಪಡೆದುಕೊಂಡು ಬಂದರೆ 8 ನೇ ಪ್ರತಿವಾದಿಯನ್ನು

ಹೊರ ಹಾಕಬಹುದು ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆ ಹೂಡಲು ಯಾವುದೇ ವ್ಯಾಜ್ಯ ಕಾರಣ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**ಪಾಟೀ ಸವಾಲು - 1 ರಿಂದ 7 ನೇ ಪ್ರತಿವಾದಿಗಳ ಪರ ವಕೀಲಗು ಗೈರು ಹಾಜರಿದ್ದು ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ